# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 88 (570) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 11.07.2023 |
| ಉತ್ತರಿಸುವ ಸಚಿವರು | : | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | 2022-23ನೇ ಸಾಲಿನಲ್ಲಿ ಕೆ.ಐ.ಎ.ಡಿ.ಬಿ ಧಾರವಾಡ ವಲಯ ಕಚೇರಿ ವ್ಯಾಪ್ತಿಯಲ್ಲಿ ಸ್ವಾಧೀನಪಡಿಸಿಕೊಂಡ ಜಮೀನುಗಳಿಗೆ ನಕಲಿ ದಾಖಲೆಗಳನ್ನು ಸೃಷ್ಟಿಸಿ ಎರಡು ಬಾರಿ ಹಾಗೂ ಹೆಚ್ಚಿನ ಪ್ರಮಾಣದಲ್ಲಿ ಪರಿಹಾರ ನೀಡಿರುವುದು ಮತ್ತು ನಿಯಮಗಳನ್ನು ಪಾಲಿಸದೆ ಖಾತೆದಾರರಿಗೆ ಬದಲಾಗಿ ಇತರರಿಗೆ ಪರಿಹಾರ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;(ಪೂರ್ಣ ವಿವರಗಳೊಂದಿಗೆ ಮಾಹಿತಿ ನೀಡುವುದು) | ವಿಶೇಷ ಭೂಸ್ವಾಧೀನಾಧಿಕಾರಿ, ಕೆಐಎಡಿಬಿ ವಲಯ ಕಛೇರಿ, ಧಾರವಾಡ ಇವರ ವ್ಯಾಪ್ತಿಗೆ ಒಳಪಡುವ ಕೆಲಗೇರಿ, ಮಮ್ಮಿಗಟ್ಟಿ ಮತ್ತು ಕೋಟೂರು ಗ್ರಾಮಗಳಲ್ಲಿ ಸ್ವಾಧೀನಪಡಿಸಿಕೊಂಡಿರುವ ಜಮೀನುಗಳ ಪೈಕಿ ಕೆಲಗೇರಿ ಗ್ರಾಮದ ಸರ್ವೆ ನಂ. 731/2, 707, 720, 711, 708, 714, 718, 709, ಮಮ್ಮಿಗಟ್ಟಿ ಗ್ರಾಮದ ಸರ್ವೆ ನಂ. 150 ಮತ್ತು ಕೋಟೂರು ಗ್ರಾಮದ ಸರ್ವೆ ನಂ.635 ರಲ್ಲಿನ ಜಮೀನುಗಳಿಗೆ ಒಟ್ಟು ರೂ. 19,99,55,000/- ಗಳ ಪರಿಹಾರದ ಹಣವನ್ನು ಎರಡು ಬಾರಿ ಅಕ್ರಮವಾಗಿ ಪಾವತಿಸಿರುವುದಾಗಿ ಸಾರ್ವಜನಿಕರು ಮತ್ತು ಜನಪ್ರತಿನಿಧಿಗಳಿಂದ ದೂರುಗಳು ಸ್ವೀಕೃತವಾಗಿರುತ್ತವೆ.<br><br>ಸದರಿ ದೂರುಗಳ ಹಿನ್ನೆಲೆಯಲ್ಲಿ ಪ್ರಸ್ತಾವಿತ ಪ್ರಕರಣಗಳ ಸಮಗ್ರ ಪರಿಶೀಲನೆ/ತನಿಖೆ ನಡೆಸುವ ಸಲುವಾಗಿ ವಿಶೇಷ ಜಿಲ್ಲಾಧಿಕಾರಿ, (ಬಿಎಂಐಸಿಪಿ ಮತ್ತು ಮೆಟ್ರೋ-ಕೆಐಎಡಿಬಿ) ನೇತೃತ್ವದಲ್ಲಿ ಹಿರಿಯ ಅಧಿಕಾರಿ ಮತ್ತು ಸಿಬ್ಬಂದಿಗಳನ್ನೊಳಗೊಂಡ ತಂಡವೊಂದನ್ನು |
| ಆ) | ಹಾಗಿದ್ದಲ್ಲಿ, ಈ ಸಂಬಂಧ ತನಿಖೆ ನಡೆಸಿ ದಿನಾಂಕ:14-12-2022 ಮತ್ತು 19-12-2022ರಂದು ತನಿಖಾ ವರದಿ ಸಲ್ಲಿಸಲಾಗಿದೆಯೇ; (ವಿವರಗಳೊಡನೆ ಮಾಹಿತಿ ನೀಡುವುದು) | ರಚಿಸಲಾಗಿದ್ದು, ಸದರಿ ತಂಡವು ದಿನಾಂಕ: 14-12-2022 & 19-12-2022ರಂದು ತನಿಖಾ ವರದಿಗಳನ್ನು ನೀಡಿ ಈ ಹಿಂದಿನ ವಿಶೇಷ ಭೂಸ್ವಾಧೀನಾಧಿಕಾರಿ, ಕೆಐಎಡಿಬಿ ವಲಯ ಕಛೇರಿ, ಧಾರವಾಡ ಮತ್ತು ಇತರೆ ಸಿಬ್ಬಂದಿಗಳು ಮಮ್ಮಿಗಟ್ಟಿ, ಕೆಳಗೇರಿ, ಕೋಟೂರು ಹಾಗೂ ಇತರೆ ಗ್ರಾಮಗಳಲ್ಲಿ ಸ್ವಾಧೀನಪಡಿಸಿಕೊಂಡಿರುವ ಕೆಲವು ಸರ್ವೆ ನಂಬರ್‌ಗಳಲ್ಲಿನ ಜಮೀನಿಗೆ ಪರಿಹಾರ ಪಾವತಿಸುವಲ್ಲಿ ಅಗತ್ಯ ನಿಯಮಗಳನ್ನು ಪಾಲಿಸದೇ ಕರ್ತವ್ಯ ಲೋಪವೆಸಗಿ ಮಂಡಳಿಗೆ ವಂಚಿಸಿ, ಒಟ್ಟು ರೂ. 19,99,55,000/- ಗಳ ಆರ್ಥಿಕ ನಷ್ಟ ಉಂಟು ಮಾಡಿರುವುದಾಗಿ ವರದಿ ನೀಡಿರುತ್ತಾರೆ. |

<table>
<tr>
<td>ಇ)</td>
<td>ತನಿಖಾ ವರದಿಯಲ್ಲಿ ಎಷ್ಟು ಮಂದಿ ಅಧಿಕಾರಿ/ನೌಕರರ ಮೇಲೆ ಆರೋಪಗಳು ಇವೆ; (ಅಧಿಕಾರಿ/ನೌಕರರ ಪೂರ್ಣ ವಿವರ ನೀಡುವುದು)</td>
<td>ಸದರಿ ತನಿಖಾ ವರದಿಯಲ್ಲಿ ಪ್ರಸ್ತಾಪಿಸಿರುವ ಅಧಿಕಾರಿ / ನೌಕರರ ವಿವರಗಳು ಕೆಳಕಂಡಂತಿದೆ:<br>
1. ಶ್ರೀ. ವಿ.ಡಿ. ಸಜ್ಜನ್, ವಿಶೇಷ ಭೂಸ್ವಾಧೀನಾಧಿಕಾರಿ (ನಿವೃತ್ತ), ಕೆಐಎಡಿಬಿ ವಲಯ ಕಛೇರಿ, ಧಾರವಾಡ.<br>
2. ಶ್ರೀ. ಎಂ.ಕೆ. ಶಿಂಪಿ, ವ್ಯವಸ್ಥಾಪಕರು, ಕೆಐಎಡಿಬಿ ವಲಯ ಕಛೇರಿ, ಧಾರವಾಡ.<br>
3. ಶ್ರೀ. ಶಂಕರ್ ವೈ ತಳವಾರ್, ಹಿರಿಯ ಸಹಾಯಕ, ಕೆಐಎಡಿಬಿ ವಲಯ ಕಛೇರಿ, ದಾವಣಗೆರೆ.<br>
4. ಶ್ರೀ. ಹೇಮಚಂದ್ರ ಬ. ಚಿಂತಾಮಣಿ, ನಿವೃತ್ತ ಶಿರಸ್ತೇದಾರ್, ಕೆಐಎಡಿಬಿ ವಲಯ ಕಛೇರಿ, ಧಾರವಾಡ.</td>
</tr>
<tr>
<td>ಈ)</td>
<td>ಸದರಿ ಪ್ರಕರಣದಲ್ಲಿ ಕೆ.ಐ.ಎ.ಡಿ.ಬಿ. ಸಂಸ್ಥೆಗೆ ಉಂಟಾಗಿರುವ ನಷ್ಟದ ಅಂದಾಜು ಮೊತ್ತವೆಷ್ಟು; (ಪೂರ್ಣ ವಿವರಗಳೊಂದಿಗೆ ಮಾಹಿತಿ ನೀಡುವುದು)</td>
<td>ಪ್ರಸ್ತಾವಿತ ಪ್ರಕರಣದಲ್ಲಿ ಮಂಡಳಿಗೆ ಉಂಟಾಗಿರುವ ಅಂದಾಜು ಆರ್ಥಿಕ ನಷ್ಟ ರೂ. 19,99,55,000/- ಗಳಾಗಿದ್ದು, ಅವುಗಳ ವಿವರ ಕೆಳಕಂಡಂತಿದೆ:
<table>
<tr><th>ಗ್ರಾಮ</th><th>ಸರ್ವೆ ನಂ</th><th>ವಿಸ್ತೀರ್ಣ</th><th>ಪರಿಹಾರದ ಮೊತ್ತ</th><th>ಪರಿಹಾರ ಪಡೆದಿರುವ ಭೂಮಾಲೀಕರ ಹೆಸರು</th></tr>
<tr><td>ಕೆಲಗೇರಿ</td><td>731/2</td><td>15-33</td><td>4,11,45,000</td><td>ಮುರಳೀಧರ</td></tr>
<tr><td>ಕೆಲಗೇರಿ</td><td>707<br>720</td><td>5-08<br>4-09</td><td>2,51,55,000</td><td>ಶಿವನಗೌಡ, ವೆಂಕನಗೌಡ ಪಾಟೀಲ್</td></tr>
<tr><td>ಕೆಲಗೇರಿ</td><td>711</td><td>13-24</td><td>3,53,60,000</td><td>ಮದರಸಾಬ್, ಖಾದರ್‌ಸಾಬ್ ಹಳಬಾವಿ</td></tr>
<tr><td>ಕೆಲಗೇರಿ</td><td>708<br>714<br>718</td><td>10-35<br>3-38<br>5-11</td><td>5,22,60,000</td><td>ಸೀತಾ ಯಲ್ಲ ನಾಯಕ್ ಪಾಟೀಲ್</td></tr>
<tr><td>ಮಮ್ಮಿಗಟ್ಟಿ</td><td>150</td><td>12-09</td><td>3,17,85,000</td><td>ಸಂಜಯ್</td></tr>
<tr><td>ಕೋಟೂರು</td><td>635</td><td>2-06</td><td>64,50,000</td><td>ಮಹಬೂಬ್ ಸುಬಾನಿ, ಶಿರೂರ್</td></tr>
<tr><td>ಕೆಲಗೇರಿ</td><td>709</td><td>3-00</td><td>78,00,000</td><td>ಬಸಪ್ಪ, ನಾಗಪ್ಪ ಶಿರೂರ್</td></tr>
</table></td>
</tr>
<tr>
<td>ಉ)</td>
<td>ಸದರಿ ಪ್ರಕರಣ ಸಂಬಂಧ ಇದುವರೆವಿಗೂ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರಗಳೊಡನೆ ಮಾಹಿತಿ ನೀಡುವುದು)</td>
<td>ಸದರಿ ಪ್ರಕರಣದಲ್ಲಿ ಮಂಡಳಿಗೆ ಆರ್ಥಿಕ ನಷ್ಟ ಉಂಟು ಮಾಡಿರುವ ಶ್ರೀ.ವಿ.ಡಿ.ಸಜ್ಜನ್, ವಿಶೇಷ ಭೂಸ್ವಾಧೀನಾಧಿಕಾರಿ. (ನಿವೃತ್ತ), ಶ್ರೀ.ಎಂ.ಕೆ. ಶಿಂಪಿ, ವ್ಯವಸ್ಥಾಪಕರು, ಶ್ರೀ.ಶಂಕರ್ ವೈ ತಳವಾರ್, ಹಿರಿಯ ಸಹಾಯಕ, ಶ್ರೀ.ಹೇಮಚಂದ್ರ ಬ. ಚಿಂತಾಮಣಿ, ನಿವೃತ್ತ ಶಿರಸ್ತೇದಾರ್ ಮತ್ತು ಇತರೆ ಬ್ಯಾಂಕ್ ಸಿಬ್ಬಂದಿಗಳು ಈ</td>
</tr>
</table>

| | | |
|---|---|---|
| | | ಪ್ರಕರಣದಲ್ಲಿ ಶಾಮೀಲಾಗಿರುವ ಸಾಧ್ಯತೆ ಇರುವುದರಿಂದ, ಸದರಿಯವರ ವಿರುದ್ಧ ಮತ್ತು 2ನೇ ಬಾರಿ ಭೂಪರಿಹಾರ ಪಡೆದ 10 ಜನ ಭೂಮಾಲೀಕರುಗಳ ವಿರುದ್ಧ ಸಂಬಂಧಪಟ್ಟ ಪೊಲೀಸ್ ಠಾಣೆಯಲ್ಲಿ ಕೂಡಲೇ ಕ್ರಿಮಿನಲ್ ಮೊಕದ್ದಮೆ ದಾಖಲಿಸುವಂತೆ ವಿಶೇಷ ಭೂ ಸ್ವಾಧೀನಾಧಿಕಾರಿ, ಧಾರವಾಡ ಇವರಿಗೆ ದಿನಾಂಕ: 19-12-2022 ರಂದು ಸೂಚಿಸಲಾಗಿರುತ್ತದೆ.<br><br>ಅದರಂತೆ, ಶ್ರೀ. ವಿ.ಡಿ. ಸಜ್ಜನ್ ಮತ್ತು ಇತರರ ವಿರುದ್ಧ ವಿದ್ಯಾಗಿರಿ ಪೊಲೀಸ್ ಠಾಣೆ, ಧಾರವಾಡ ಇಲ್ಲಿ ಎಫ್.ಐ.ಆರ್. ಸಂಖ್ಯೆ: 0251/2022 ಕಲಂ 406, 409, 419, 420, 465, 467, 468, 471, 201 ಸಹ ಕಲಂ 34 ಐಪಿಸಿ ರನ್ವಯ ದಿನಾಂಕ: 20-12-2022 ರಂದು ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿರುತ್ತದೆ.<br><br>ಅಲ್ಲದೇ, ಶ್ರೀ ಎಂ.ಕೆ. ಶಿಂಪಿ, ವ್ಯವಸ್ಥಾಪಕರು ಹಾಗೂ ಶ್ರೀ ಶಂಕರ್ ವೈ ತಳವಾರ್, ಹಿರಿಯ ಸಹಾಯಕರು ಇವರುಗಳನ್ನು ದಿನಾಂಕ 19.12.2022 ರಂದು ಸೇವೆಯಿಂದ ಅಮಾನತ್ತುಗೊಳಿಸಲಾಗಿದೆ.<br><br>ಮುಂದುವರೆದು, ಸದರಿ ಪ್ರಕರಣದ ತನಿಖೆಯನ್ನು ಸಿ.ಐ.ಡಿ. ಘಟಕ, ಧಾರವಾಡ ಇವರು ಕೈಗೊಂಡಿದ್ದು, ಈ ಪ್ರಕರಣದಲ್ಲಿ ಅಧಿಕಾರಿ/ಸಿಬ್ಬಂದಿ ಮತ್ತು ಆರೋಪಿಗಳನ್ನು ನ್ಯಾಯಾಂಗ ಬಂಧನದಲ್ಲಿಡಲಾಗಿದೆ ಮತ್ತು ಸದರಿ ಪ್ರಕರಣದ ತನಿಖೆ ಪ್ರಗತಿಯಲ್ಲಿದೆ. |

**ಸಂಖ್ಯೆ: ಸಿಐ 144 ಐಎಪಿ 2023**

**(ಎಂ.ಬಿ. ಪಾಟೀಲ)**
**ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು**